

ಮನೆಯಲ್ಲಿ ಸ್ವಲ್ಪ ದಿನ ಕೆಲಸ ಮಾಡಿಕೊಂಡಿದ್ದರೆ ಅವರು ಸಂಬಳ ಅಂತ ದುಡ್ಡು ಕೊಡ್ತಾರೆ, ಅವಳ ಮದುವೆ ಖರ್ಚಿಗೂ ಸ್ವಲ್ಪ ಸಹಾಯ ಆಗುತ್ತೆ' ಅಂತ ಗಂಟೆಗಟ್ಟಲೆ ಮಾತನಾಡಿ ಅಪ್ಪನ್ನ ಒಪ್ಪಿಸಿದರು. ಅವ್ವಂಗೆ ಅಷ್ಟೇನು ಇಷ್ಟ ಇರ್ಲಿಲ್ಲ. ಆದ್ರೂ ಸುಂಕಾದ್ಲು. ಅಂದೇ ಸಂಜೆ ನನ್ನನ್ನು ತಮ್ ಕಾರಲ್ಲೇ ಮೈಸೂರಿಗೆ ಕರೆದುಕೊಂಡು ಬಂದ್ರು.

ನಂಗೋ ಖುಷಿಯೋ ಖುಷಿ. ಶ್ರೀಮಂತರ ಮನೆಯಲ್ಲಿ ಆರಾಮಾಗಿ ಬಗೆ ಬಗೆಯ ರುಚಿರುಚಿಯಾದ ತಿಂಡಿ ತಿನ್ನಬೌದು. ಟೀವೀಲಿ ರಾಜಕುಮಾರ್ ಸಿನಿಮಾ ನೋಡಬೋದು... ಇತ್ಯಾದಿ ಕನಸ್ಸುಗಳು. ಸೌಮ್ಯಕ್ಕ ಪ್ರೊಫೆಸರ್ ಮನೆ ಮುಂದೆ ಕಾರು ನಿಲ್ಲಿಸಿ, 'ಇಳಿಯೇ ಹುಡುಗಿ' ಎಂದಾಗ ನಾನು ಕನಸಿನಿಂದ ಇಕಡೀಗೆ ವರಳ್ಕಂಡೆ.

ದೊಡ್ಡ ಕಾಂಪೌಂಡು, ಚಿಕ್ಕ ಗೇಟು, ಮೂರ್ನಾಲ್ಕು ರೂಮು ಇರೋ ದೊಡ್ಡ ಮಹಡಿ ಮನೆ. ಬೋ